**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು**

**ಸಿಸಿ ನಂ. 882/2019**

| | | |
|---|---|---|
| ಹೆಸರು | ಗೋವಿಂದಪ್ಪ | **ಚಾಸಾ-1 ಪ್ರಾಸಾ-1** |
| ತಂದೆಯ ಹೆಸರು | ಪಾಪಣ್ಣ | **ಸಾಕ್ಷಿಯನ್ನು ದಿಃ 06.12.2023 ರಂದು ಪ್ರಮಾಣೀಕರಿಸಲಾಯಿತು.** |
| ವಯಸ್ಸು | 55 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ದೊಡ್ಡನಾಯಕನಹಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ನನ್ನ ಸ್ವಂತದ ಕೆಲಸದ ನಿಮಿತ್ತ ನಾನು ತಾಲ್ಲೂಕು ಕಛೇರಿಗೆ ಬಂದಿದ್ದೆ, ಪೊಲೀಸರು ಸಹಿ ಮಾಡು ಎಂದರು ಅದಕ್ಕಾಗಿ ನಾನು ಸಹಿ ಮಾಡಿದ್ದೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಗೆ 4 ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ.1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಶೋಧನೆ ಸಮುಚಿತ ಆಧಾರವನ್ನು ನಿಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಲಿಸ್ಟ್ ಆಫ್ ಆರ್ಟಿಕಲ್ಸ್ ಅನ್ನು ನಿಪಿ.3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲಿನ ನಕಲನ್ನು ನಿಪಿ.4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಎಲ್ಲಾ ಸಹಿಗಳನ್ನು ನಾನು ಪೊಲೀಸರು ಹೇಳಿದ ಮೇರೆಗೆ ಸಹಿ ಹಾಕಿದ್ದೇನೆ. ನಿಪಿ.1 ರಿಂದ 4 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದಃ**

ದಿ:31.01.2019 ರಂದು ರಾತ್ರಿ ಸುಮಾರು 8.30 ಸಮಯದಲ್ಲಿ ನಾನು ಮತ್ತು ಚಾಸಾ.2 ರವರು ದೊಡ್ಡನಾಯಕನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಕುಳಿತಿದ್ದಾಗ ಅಬಕಾರಿ ನಿರೀಕ್ಷಕರು ಹಾಗೂ ಅವರ ಸಿಬ್ಬಂದಿಗಳು ಅವರನ್ನು ಪರಿಚಯಿಸಿಕೊಂಡು ಅದೇ ಗ್ರಾಮದ ಸಂಪತ್ ಬಿನ್ ಕೃಷ್ಣಪ್ಪ ಆರೋಪಿಯ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಇದ್ದು, ಆ ಬಗ್ಗೆ ಪರಿಶೀಲಿಸಲು ಪಂಚರಾಗಿ ಸಹಕರಿಸುವ ಬಗ್ಗೆ ಕೋರಿದ್ದರು ಎಂದರೆ ಸರಿಯಲ್ಲ. ನಾವು ಒಪ್ಪಿ ನಿಪಿ.2 ನ್ನು ಸಿದ್ದಪಡಿಸಿದಾಗ ನಮ್ಮ ಸಹಿಯನ್ನು ಹಾಕಿದೆವು ಎಂದರೆ ಸರಿಯಲ್ಲ. ಆರೋಪಿಯ ಮನೆಯ ಒಳಗೆ ಹೋಗುವ ಮುನ್ನ ಅಂಗ ಶೋಧನೆಯನ್ನು ಒಳಪಡಿಸಿಕೊಂಡು ಮನೆಯ ಗೇಟನ್ನು ತೆರೆದಾಗ ಮನೆಯ ಮುಂಭಾದ ಜಗಲಿಯಲ್ಲಿ ಮಲಗಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ಅಧಿಕಾರಿಯನ್ನು ನೋಡಿ, ಗಾಬರಿಯಿಂದ ಕಾಂಪೌಂಡ್ ಗೋಡೆಯನ್ನು ಜಿಗಿದು ಓಡಲು ಪ್ರಯತ್ನಿಸಿರುತ್ತಾನೆ. ಸಿಬ್ಬಂದಿ ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದಾಗ ಕತ್ತಲೆ ಇದ್ದ ಕಾರಣ ಆತನನ್ನು ಹಿಡಿಯಲು ಆಗಲಿಲ್ಲ ಎಂದರೆ ಸರಿಯಲ್ಲ. ನಂತರ ವಿಚಾರಿಸಲಾಗಿ ಆತನ ಹೆಸರು ಸಂಪತ್ ಬಿನ್ ಲೇಟ್ ಕೃಷ್ಣಪ್, 35 ವರ್ಷ ಎಂದು ತಿಳಿದುಬಂತು ಎಂದರೆ ಸರಿಯಲ್ಲ. ನಮ್ಮಗಳ ಸಮಕ್ಷಮ ಬ್ಯಾಟರಿಯ ಬೆಳಕಿನ ಸಹಾಯದಿಂದ ಮನೆಯ ಬಾಗಿಲನ್ನು ತೆಗೆಯಲು ಹೋದಾಗ ಬೀಗ ಹಾಕಿರುವುದು ಕಂಡುಬಂದಿದ್ದು ನಂತರ ಜಗಲಿಯಲ್ಲಿ ಹುಡುಕಿದಾಗ ಮಂಚದ ಕೆಳಗೆ ಬಿಳಿ ಪ್ಲಾಸ್ಟಿಕ್ ಚೀಲವು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ, 180 ಮಿಲಿಯ 6 ಹಾಗೂ 90 ಮಿಲಿಯ 36-ಪಿ.ಎಸ್.ಎನ್ ಟೆಟ್ರಾ ಪ್ಯಾಕೆಟ್ಟಗಳು ಒಟ್ಟು 4.320 ಲೀ. ಮದ್ಯ ಕಂಡುಬಂದಿದ್ದು ಎಲ್ಲಾ ಮದ್ಯವನ್ನು ಜಪ್ತಿಪಡಿಸಿ ರಾಸಾಯನಿಕ ವಿಶ್ಲೇಷಣೆಗೆಂದು ಎಲ್ಲಾ ಮದ್ಯವನ್ನು ಮಾದರಿ ತೆಗೆಯಲಾಯಿತು ಎಂದರೆ ಸರಿಯಲ್ಲ. ಆಗ ಅಬಕಾರಿ ಅಧಿಕಾರಿಗಳು ದೊರೆತ ನಿಪಿ.1, 3 ಮತ್ತು 4 ಕ್ಕೆ ನಾವು ಹಾಜರಿದ್ದು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಹಾಗೂ ಈ ಎಲ್ಲಾ ವಿಚಾರವನ್ನು ನಾನು ಅಬಕಾರಿ ಠಾಣೆಗೆ ಹಾಜರಾಗಿ ದಿ:11.07.2019 ರಂದು ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿ ನಮ್ಮ ಊರಿನವರಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**Sd/-**

2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು**

**ಸಿಸಿ ನಂ. 882/2019**

| | | |
|---|---|---|
| ಹೆಸರು | ವೆಂಕಟೇಶಪ್ಪ | ಚಾಸಾ-2 ಪ್ರಾಸಾ-2 |
| ತಂದೆಯ ಹೆಸರು | ಲೇಟ್. ಮುನಿಯಪ್ಪ | ಸಾಕ್ಷಿಯನ್ನು ದಿಃ 06.12.2023 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸು | 65 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ದೊಡ್ಡನಾಯಕನಹಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ನನ್ನ ಸ್ವಂತದ ಕೆಲಸದ ನಿಮಿತ್ತ ನಾನು ತಾಲ್ಲೂಕು ಕಛೇರಿಗೆ ಬಂದಿದ್ದೆ, ಪೊಲೀಸರು ಸಹಿ ಮಾಡು ಎಂದರು ಅದಕ್ಕಾಗಿ ನಾನು ಸಹಿ ಮಾಡಿದ್ದೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಗೆ 4 ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಶೋಧನೆ ಸಮುಚಿತ ಆಧಾರದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಲಿಸ್ಟ್ ಆಫ್ ಆರ್ಟಿಕಲ್ಸ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಮಾದರಿ ಸೀಲಿನ ನಕಲಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಎಲ್ಲಾ ಸಹಿಗಳನ್ನು ನಾನು ಪೊಲೀಸರು ಹೇಳಿದ ಮೇರೆಗೆ ಸಹಿ ಹಾಕಿದ್ದೇನೆ. ನಿಪಿ.1 ರಿಂದ 4 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದಃ**

ದಿಃ31.01.2019 ರಂದು ರಾತ್ರಿ ಸುಮಾರು 8.30 ಸಮಯದಲ್ಲಿ ನಾನು ಮತ್ತು ಪ್ರಾಸಾ.1 ರವರು ದೊಡ್ಡನಾಯಕನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಕುಳಿತಿದ್ದಾಗ ಅಬಕಾರಿ ನಿರೀಕ್ಷಕರು

ಹಾಗೂ ಅವರ ಸಿಬ್ಬಂದಿಗಳು ಅವರನ್ನು ಪರಿಚಯಿಸಿಕೊಂಡು ಅದೇ ಗ್ರಾಮದ ಸಂಪತ್ ಬಿನ್ ಕೃಷ್ಣಪ್ಪ ಆರೋಪಿಯ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಇದ್ದು, ಆ ಬಗ್ಗೆ ಪರಿಶೀಲಿಸಲು ಪಂಚರಾಗಿ ಸಹಕರಿಸುವ ಬಗ್ಗೆ ಕೋರಿದ್ದರು ಎಂದರೆ ಸರಿಯಲ್ಲ. ನಾವು ಒಪ್ಪಿ ನಿಪಿ.2 ನ್ನು ಸಿದ್ದಪಡಿಸಿದಾಗ ನಮ್ಮ ಸಹಿಯನ್ನು ಹಾಕಿದೆವು ಎಂದರೆ ಸರಿಯಲ್ಲ. ಆರೋಪಿಯ ಮನೆಯ ಒಳಗೆ ಹೋಗುವ ಮುನ್ನ ಅಂಗ ಶೋಧನೆಯನ್ನು ಒಳಪಡಿಸಿಕೊಂಡು ಮನೆಯ ಗೇಟನ್ನು ತೆರೆದಾಗ ಮನೆಯ ಮುಂಭಾದ ಜಗಲಿಯಲ್ಲಿ ಮಲಗಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ಅಧಿಕಾರಿಯನ್ನು ನೋಡಿ, ಗಾಬರಿಯಿಂದ ಕಾಂಪೌಂಡ್ ಗೋಡೆಯನ್ನು ಜಿಗಿದು ಓಡಲು ಪ್ರಯತ್ನಿಸಿರುತ್ತಾನೆ. ಸಿಬ್ಬಂದಿ ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದಾಗ ಕತ್ತಲೆ ಇದ್ದ ಕಾರಣ ಆತನನ್ನು ಹಿಡಿಯಲು ಆಗಲಿಲ್ಲ ಎಂದರೆ ಸರಿಯಲ್ಲ. ನಂತರ ವಿಚಾರಿಸಲಾಗಿ ಆತನ ಹೆಸರು ಸಂಪತ್ ಬಿನ್ ಲೇಟ್ ಕೃಷ್ಣಪ್, 35 ವರ್ಷ ಎಂದು ತಿಳಿದುಬಂತು ಎಂದರೆ ಸರಿಯಲ್ಲ. ನಮ್ಮಗಳ ಸಮಕ್ಷಮ ಬ್ಯಾಟರಿಯ ಬೆಳಕಿನ ಸಹಾಯದಿಂದ ಮನೆಯ ಬಾಗಿಲನ್ನು ತೆಗೆಯಲು ಹೋದಾಗ ಬೀಗ ಹಾಕಿರುವುದು ಕಂಡುಬಂದಿದ್ದು ನಂತರ ಜಗಲಿಯಲ್ಲಿ ಹುಡುಕಿದಾಗ ಮಂಚದ ಕೆಳಗೆ ಬಿಳಿ ಪ್ಲಾಸ್ಟಿಕ್ ಚೀಲವು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ, 180 ಮಿಲಿಯ 6 ಹಾಗೂ 90 ಮಿಲಿಯ 36-ಪಿ.ಎಸ್.ಎನ್ ಟೆಟ್ರಾ ಪ್ಯಾಕೆಟ್ಗಳು ಒಟ್ಟು 4.320 ಲೀ. ಮದ್ಯ ಕಂಡುಬಂದಿದ್ದು ಎಲ್ಲಾ ಮದ್ಯವನ್ನು ಜಪ್ತಿಪಡಿಸಿ ರಾಸಾಯನಿಕ ವಿಶ್ಲೇಷಣೆಗೆಂದು ಎಲ್ಲಾ ಮದ್ಯವನ್ನು ಮಾದರಿ ತೆಗೆಯಲಾಯಿತು ಎಂದರೆ ಸರಿಯಲ್ಲ. ಆಗ ಅಬಕಾರಿ ಅಧಿಕಾರಿಗಳು ದೊರೆತ ನಿಪಿ.1, 3 ಮತ್ತು 4 ಕ್ಕೆ ನಾವು ಹಾಜರಿದ್ದು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಹಾಗೂ ಈ ಎಲ್ಲಾ ವಿಚಾರವನ್ನು ನಾನು ಅಬಕಾರಿ ಠಾಣೆಗೆ ಹಾಜರಾಗಿ ದಿಃ11.07.2019 ರಂದು ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿ ನಮ್ಮ ಊರಿನವರಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**Sd/-**

2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು